ಸಾಕ್ಷಿಯನ್ನು ದಿನಾಂಕಃ **16-06-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ. ಜಿ ಜಿ ಬಿ., ವಕೀಲರಿಂದಃ**

ಈ ದಾವೆ ಮಾಡುವ ಪೂರ್ವದಲ್ಲಿ ದಾವಾ ಸ್ಥಳದ ಸರ್ವೇ ಮಾಡಿಸಿದ್ದೆನು. ಈ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನಾವು 30 ಗುಂಟೆ ಕಬ್ಜಾವನ್ನು ನೀಡಬೇಕೆಂದು ಈ ದಾವೆಯಲ್ಲಿ ಕೇಳಿದ್ದೇವೆ. 30 ಗುಂಟೆಯನ್ನು ಪ್ರತಿವಾದಿಗಳು ಕಬ್ಜಾ ಮಾಡಿದ್ದಾರೆ. ದಾವಾ ದಾಖಲಿಸುವಾಗ ಪೂರ್ತಿ 30 ಗುಂಟೆಗೂ ಕಬ್ಜಾ ಬೇಕೆಂದು ವಕೀಲರಲ್ಲಿ ಬರೆಸಿಕೊಂಡಿದ್ದೆನು. ಸಾಕ್ಷಿಯು ಮುಂದುವರೆದು ಪ್ರತಿವಾದಿಯವರು ಕೇವಲ 5 ಗುಂಟೆ ಜಾಗವನ್ನು ಕಬ್ಜಾಪಡಿಸಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಈ ವಶಪಡಿಸಿಕೊಂಡ 5 ಗುಂಟೆ ಜಾಗದ ಬಗ್ಗೆ ನಕಾಶೆಯನ್ನು ಹಾಜರುಪಡಿಸಿರುತ್ತೇನೆ.

2. ಆರ್ ಎ ನಂ. 38/2009 ಈ ಪ್ರಕರಣವು ಮೇಲ್ಮನವಿ ನ್ಯಾಯಾಲಯದಲ್ಲಿ ನಡೆಯುತ್ತಿರುವಾಗ ನಾನು ನನ್ನ ಚಿಕ್ಕಪ್ಪನೊಂದಿಗೆ ನ್ಯಾಯಾಲಯಕ್ಕೆ ಬರುತ್ತಿದ್ದೆ. ಈ ಮೇಲ್ಮನವಿ ನಿಖಾಲೆಯಾದ ಸಂಗತಿ ನನಗೆ ತಿಳಿದಿಲ್ಲ. ನಾನು ಆರ್ ಎ ನಂ. 38/2009 ಈ ಪ್ರಕರಣದಲ್ಲಿ ನಾನು ನನ್ನ ಚಿಕ್ಕಪ್ಪನೊಂದಿಗೆ ನ್ಯಾಯಾಲಯಕ್ಕೆ ಬಂದಿದ್ದು, ಈ ಪ್ರಕರಣ ನಿಖಾಲೆಯಾದ ಮಾಹಿತಿ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೇಲ್ಮನವಿ ನಿಖಾಲೆಯಾದ ಬಳಿಕ ನನಗೆ ಸಾಕಷ್ಟು ಸಮಯವಿದ್ದರೂ ಈ ಪ್ರಕರಣವನ್ನು ದಾಖಲಿಸಲು ವಿಳಂಬ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಕಬ್ಜೆಯಲ್ಲಿರುವ ಜಾಗವನ್ನು ನಾವು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ನಮ್ಮ ಪರವಾಗಿ ಬೇರೆ ಯಾರೂ ಸಾಕ್ಷಿ ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

-Sd-

**ಹೆಚ್ಚುವರಿ ಸಿವಿಲ್ ಜಡ್ಜ್,ಹೊನ್ನಾವರ.**